ಮಾಡಿದ್ದಾರೆ. ಈ ವಿಷಯವನ್ನು ಸನ್ಮಾನ್ಯ ಕಂದಾಯ ಇಲಾಖೆಯ ಸಚಿವರ ಗಮನಕ್ಕೆ ತಂದು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಅಲ್ಲಿ ಇರುವವರು ಬಹಳ ಉನ್ನತ ಸ್ಥಾನದಲ್ಲಿದ್ದಾರೆ. ಆದ್ದರಿಂದ ದಯಮಾಡಿ ಅದನ್ನೂ ಸಹ ತಾವು consider ಮಾಡಬೇಕು.

4. ವಿಷಯ : ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಾಹಿತಿ ಸಿಂಧು ಯೋಜನೆ ಅಡಿಯಲ್ಲಿ ಕಂಪ್ಯೂಟರ್ ಶಿಕ್ಷಣ ನೀಡುತ್ತಿದ್ದ ಶಿಕ್ಷಕರನ್ನು ಪುನರ್ ನೇಮಕಾತಿ ಮಾಡಿಕೊಳ್ಳುವ ಬಗ್ಗೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಾಹಿತಿ ಸಿಂಧು ಯೋಜನೆ ಅಡಿಯಲ್ಲಿ ಕಂಪ್ಯೂಟರ್ ಶಿಕ್ಷಣ ಎಂದು ಮಾಡಲಾಗಿತ್ತು. ಅಲ್ಲಿ ಕೆಲವು ಶಿಕ್ಷಕರು ಕೆಲಸ ಮಾಡುತ್ತಿದ್ದರು. ಹೈಸ್ಕೂಲ್‌ನಲ್ಲಿ ಇದು ಬಹಳ ಜನಪ್ರಿಯ ಕಾರ್ಯಕ್ರಮವೆಂದು ನಡೆಯುತ್ತಿತ್ತು. ಅಲ್ಲಿದ್ದಂತಹ ಶಿಕ್ಷಕರನ್ನು ಈಗ ತೆಗೆದು ಹಾಕಿದ್ದಾರೆ. ಈಗ ಅವರೆಲ್ಲ ಬೀದಿಪಾಲಾಗಿದ್ದಾರೆ. ಅವರಲ್ಲಿ ಕೆಲವರಿಗೆ ಮದುವೆ ಆಗಿದೆ. ಅವರಿಗೆ ಹೆಂಡತಿ ಮಕ್ಕಳು ಇದ್ದಾರೆ. ಈಗ ಅವರು ಬೀದಿಪಾಲಾಗಿದ್ದು ಅವರಿಗೆ ಯಾವುದೇ ಉದ್ಯೋಗ ಇಲ್ಲದೆ ಇರುವುದರಿಂದ ಅವರೆಲ್ಲರೂ ಬಹಳ ತೊಂದರೆಯಲ್ಲಿದ್ದಾರೆ. ಅವರಿಗೆ ಸಂಬಂಧಪಟ್ಟಂತೆ ಫೈಲ್ ಏನೋ move ಆಗುತ್ತಿದೆ ಎಂದು ಹೇಳಿದ್ದಾರೆ. ಆಂದರೆ ಹೊಸದಾಗಿ recruitment rules ಮಾಡಿ ಅವರಿಗೆ ಉದ್ಯೋಗ ಸೃಷ್ಟಿ ಮಾಡಿ ಅವರೆಲ್ಲರನ್ನು ತೆಗೆದುಕೊಳ್ಳುವುದಕ್ಕೆ ಏನೋ ಪ್ರಯತ್ನ ನಡೆಯುತ್ತಿದೆಯಂತೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಏನಾದರೂ ಆಲೋಚನೆ ಮಾಡಿದೆಯೇ ? ಸರ್ಕಾರಿ ಪ್ರೌಢಶಾಲೆಯಲ್ಲಿ ಮತ್ತೆ ಮಾಹಿತಿ ಸಿಂಧು ಯೋಜನೆ ಅಡಿಯಲ್ಲಿ ಕಂಪ್ಯೂಟರ್ ಶಿಕ್ಷಣ ಕೊಡತಕ್ಕಂಥದು ಮತ್ತು ಇವರನ್ನೆ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳತಕ್ಕಂಥದು. ಮಾಡಿದರೆ ಅವರ ಜೀವನಕ್ಕೆ ಒಂದು security ಕೊಟ್ಟಂತೆ ಆಗುತ್ತದೆ. ಹಾಗೆಯೇ ಅವರೂ ಕೂಡ ಬದುಕುವುದಕ್ಕೆ ಅನುಕೂಲ. ಆಗುತ್ತದೆ. ಆದ್ದರಿಂದ, ಅದರ ಬಗ್ಗೆ

ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಾಗಿರುವ ಶ್ರೀ ಸಿದ್ದರಾಮಯ್ಯನವರು ಪ್ರಸ್ತಾಪ ಮಾಡಿರುವ ಮಾಹಿತಿ ಸಿಂಧು ಯೋಜನೆ ಅಡಿಯಲ್ಲಿ ಕೆಲಸ ಮಾಡುತ್ತಿರುವಂಥವರ ಅವಧಿ ಮುಗಿದಿದೆ. ಅವರನ್ನು ಮತ್ತೆ ಪುನರ್ ನೇಮಕಾತಿ ಮಾಡಿಕೊಳ್ಳಬೇಕೆಂಬ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಮೆಲ್ಲರಿಗೂ ಗೊತ್ತಿರುವ ಪ್ರಕಾರ 2000–01ನೇ ಸಂದರ್ಭದಲ್ಲಿ ಈ ಮಾಹಿತಿ ಸಿಂಧು ಯೋಜನೆ ಪ್ರಾರಂಭವಾಯಿತು. ಆ ಸಂದರ್ಭದಲ್ಲಿ ಈ ಯೋಜನೆ ಪ್ರಾರಂಭವಾಗಿ 2009–10ನೇ ಸಾಲಿನಲ್ಲಿ ಸದರಿ ಯೋಜನೆ ಬೇರೆ ಬೇರೆ ಹಂತದಲ್ಲಿ ಮುಕ್ತಾಯವಾಯಿತು. ಈ ಎಲ್ಲ ಸಂದರ್ಭದಲ್ಲಿಯೂ ಸಹ ನಮ್ಮ ಇಲಾಖೆ ವತಿಯಿಂದ ಇವರನ್ನು ನೇರವಾಗಿ ಎಂದೂ ತೆಗೆದುಕೊಂಡಿಲ್ಲ. ಇದನ್ನು ಜಾರಿಗೊಳಿಸುವುದಕ್ಕೆ ಹಿಂದಿನ ಸರ್ಕಾರ ಕಿಯೋನಿಕ್ಸ್‌ರವರಿಗೆ ಹೇಳಿತ್ತು. ಕಿಯೋನಿಕ್ಸ್‌ರವರು yuva.com ಎಂದು ಮಾಡಿಕೊಂಡು. ಅವರಿಂದ ಇವರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿತ್ತು. ಗುತ್ತಿಗೆ ಆಧಾರದ ಮೇಲೆಯೇ ಇವರ ಸೇವೆಯನ್ನು ಅವರು ಬಳಸಿಕೊಂಡಿದ್ದಾರೆ. ಈಗ ಅವರ ಗುತ್ತಿಗೆ ಅವಧಿ ಮುಗಿದಿದೆ. ಆದ್ದರಿಂದ, ಅವರು ಇವರನ್ನು ಬಿಟ್ಟಿದ್ದಾರೆ. ಆದ್ದರಿಂದ ನಮ್ಮ ಇಲಾಖೆಗೆ ಯಾವುದೇ ರೀತಿಯಿಂದಲೂ ಸಹ ನೇರವಾದಂಥ ಸಂಪರ್ಕ ಇಲ್ಲ. ಅದನ್ನು ಜಾರಿಗೊಳಿಸುವುದಕ್ಕೆ ನಾವು ಅವರಿಗೆ ಕೊಟ್ಟಿದ್ದೆವು. ಅವರು ಗುತ್ತಿಗೆ ಆಧಾರದ ಮೇಲೆ ಇವರನ್ನು ತೆಗೆದುಕೊಂಡಿದ್ದರು. ಅವರ ಗುತ್ತಿಗೆ ಅವಧಿ ಈಗ ಮುಗಿದಿದೆ. ತಾವು ಹೇಳಿದಂತೆ ಅವರು ಕಷ್ಟದಲ್ಲಿರುವುದು ಸತ್ಯ. ಏಕೆಂದರೆ, ಅವರು ಇಷ್ಟು ವರ್ಷ ಅಲ್ಲಿ ಕೆಲಸ ಮಾಡಿದ್ದಾರೆ. ಆದ್ದರಿಂದ, ಈಗ ನಾವು ಏನು ಮಾಡುತ್ತಿದ್ದೇವೆಂದರೆ, ಈಗ ICT Phase ವಿವಿಧ ಹಂತದಲ್ಲಿ ಜಾರಿಗೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ICT Phase ಅನ್ನು ಸಹ ಜಾರಿಗೊಳಿಸುವುದಕ್ಕೆ ಕಿಯೋನಿಕ್ಸ್‌ರವರಿಗೆ ನಾವು ತಿಳಿಸಿದ್ದೇವೆ. ಹಿಂದೆಯೂ ಕೂಡ ಇವರೇ ಮಾಡಿದ್ದರು. ಈಗಲೂ ಸಹ

ಅವರೇ ಮಾಡುತ್ತಿದ್ದಾರೆ. ಆದ್ದರಿಂದ Phase 3 ರಲ್ಲಿ ಇವರಿಗೆ ಆದ್ಯತೆ ಕೊಡಬೇಕೆಂಬುದನ್ನು ಅವರಿಗೆ ತಿಳಿಸುತ್ತಿದ್ದೇನೆ. ಅಲ್ಲಿಯಾದರೂ ಅವರಿಗೆ ಉದ್ಯೋಗ ಮುಂದುವರೆಸುವುದಕ್ಕೆ ಕಿಯೋನಿಕ್ಸ್‌ರವರ ಮೂಲಕ ನಮ್ಮ ಇಲಾಖೆಯ ಪ್ರಯತ್ನವನ್ನು ನಾವು ಮುಂದುವರಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : They have rendered service through your department in Government High School, not in the Keonics Company. ಆದ್ದರಿಂದ ನಾನು ಹೇಳುವುದೇನೆಂದರೆ, ನಿಮಗೆ ಅವರ ಉಪಯೋಗ ಬೇಕಾಗಿರುವುದರಿಂದ ಅವರನ್ನು recruitment ಮಾಡಿಕೊಂಡು ಮತ್ತೆ ಅವರಿಗೆ ಉದ್ಯೋಗ ಕೊಡತಕ್ಕಂಥ ಪ್ರಯತ್ನ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಕಿಯೋನಿಕ್ಸ್‌ರವರಿಗೆ ಹೇಳಿದರೆ ಅವರು ತೆಗೆದುಕೊಳ್ಳುತ್ತಾರೆಯೋ ಅಥವಾ ಇಲ್ಲವೋ, ಅವರ ಸೇವೆ ನಿಮಗೆ ಬೇಕಾಗುತ್ತದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಅದರ ಬಗ್ಗೆ ಚರ್ಚೆ ನಡೆಯುತ್ತಿದೆಯಂತೆ. ಆದ್ದರಿಂದ, ಮಾನವೀಯತೆ ದೃಷ್ಟಿಯಿಂದ ಅವರ ಬಗ್ಗೆ ನೋಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನವೀಯತೆ ದೃಷ್ಟಿಯಿಂದ ಪರಿಶೀಲಿಸಿ ಕಿಯೋನಿಕ್ಸ್‌ರವರ ಮುಖಾಂತರ ಅವರಿಗೆ ಉದ್ಯೋಗ ಕೊಡಿಸುವಂಥ ಒಂದು ಅವಕಾಶಕ್ಕಾಗಿ ನಾವು ಪ್ರಯತ್ನ ಮಾಡುತ್ತೇವೆ. ಆದರೆ, ಇದುವರೆಗೆ ಈ ಕಂಪ್ಯೂಟರ್ ಶಿಕ್ಷಕರನ್ನು ಖಾಯಂ ಆಗಿ ನಮ್ಮ ಇಲಾಖೆಯಲ್ಲಿಯೇ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ನಮ್ಮ ಸರ್ಕಾರದ ಮುಂದೆ ಇಲ್ಲ.

ಶ್ರೀ ಸಿದ್ದರಾಮಯ್ಯ : Special Recruitment Rules ಮಾಡಿಕೊಂಡು ನೇಮಕ ಮಾಡಿಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆ ರೀತಿಯಾಗಿ ಏನಾದರೂ ಮಾಡಿಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತೇವೆ.